2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 24

| | |
|---|---|
| ಸಾಕ್ಷಿಯ ಹೆಸರುಃ | ಕುಮಾರ. ಅಕುಲ ಸಂತೋಷ ಪದ್ಮನ್ನನವರ |
| ತಂದೆಯ ಹೆಸರುಃ | ಸಂತೋಷ ಪದ್ಮನ್ನನವರ |
| ವಯಸ್ಸುಃ | 11 ವರ್ಷ |
| ಉದ್ಯೋಗಃ | 5 ನೇ ತರಗತಿ ವಿದ್ಯಾರ್ಥಿ, ಲಿಟಲ್ ಸ್ಕಾಲರ್ಸ ಅಕಾಡೆಮಿ ಹೈಸ್ಕೂಲ್ |
| ವಾಸಃ | ಆಂಜನೇಯ ನಗರ, ಬೆಳಗಾವಿ. |

**ದಿನಾಂಕಃ 13.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಗೆ ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಬಂದಿದ್ದೀಯಾ ಎಂದು ಕೇಳಿದ್ದಕ್ಕೆ ಆತ ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆಂದು ಹೇಳುತ್ತಾನೆ ಹಾಗೂ ನ್ಯಾಯಾಲಯದಲ್ಲಿ ನಾವು ಸತ್ಯವನ್ನೇ ಹೇಳಬೇಕು ಇಲ್ಲದಿದ್ದರೆ ಶಿಕ್ಷೆ ಆಗುತ್ತದೆ ಎಂದು ಹೇಳುತ್ತಾನೆ. ಆತನಿಗೆ ನ್ಯಾಯಾಲಯದಲ್ಲಿ ಪ್ರಮಾಣ ವಚನದ ಉದ್ದೇಶ ತಿಳಿದಿದೆ. ಆದ್ದರಿಂದ ಆತನಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಸಂತೋಷ ಪದ್ಮನ್ನನವರ ನನ್ನ ತಂದೆ. ಉಮಾ ಪದ್ಮನ್ನನವರ ನನ್ನ ತಾಯಿ. ಆಕೆ ಈ ಪ್ರಕರಣದಲ್ಲಿ 1 ನೇ ಆರೋಪಿ. ಪ್ರಶಾಂತ ಶಿವಾನಂದ ಎಮ್ಮಿ ನನ್ನ ಮಾಮನಾಗಬೇಕು. ಆತ ಈ ಪ್ರಕರಣದ 5 ನೇ ಆರೋಪಿ. ಚಾಸಾಃ 1 ನನ್ನ ಅಕ್ಕ. ಚಾಸಾಃ 25 ಸುಜಲ್ ಸಂತೋಷ ಪದ್ಮನ್ನನವರ ನನ್ನ ಅಣ್ಣ. ಚಾಸಾಃ 26 ನಮ್ಮ ದೊಡ್ಡಪ್ಪನ ಮಗ. ಚಾಸಾಃ 27 ನನ್ನ ದೊಡ್ಡಪ್ಪನಾಗಬೇಕು.

2. ಮನೆಯಲ್ಲಿ ನಾನು, ನನ್ನ ಅಣ್ಣ ಸುಜಲ್, ನನ್ನ ತಂದೆ ಸಂತೋಷ ಪದ್ಮನ್ನವರ ಹಾಗೂ ನನ್ನ ತಾಯಿ ಉಮಾ ಪದ್ಮನ್ನವರ ಹಾಗೂ ನನ್ನ ಅಕ್ಕ ಸಂಜನಾ ಕೂಡಿಯೇ ಇರುತ್ತಿದ್ದೇವು.

ನನ್ನ ಅಕ್ಕ ಸಂಜನಾ ಬೆಂಗಳೂರಿನಲ್ಲಿ ಕಾಲೇಜಿಗೆ ಕಲಿಯಲು ಹೋಗುತ್ತಿದ್ದಾಳೆ. ಆಕೆ ಈಗ ಇಂಜಿನಿಯರಿಂಗ್ ಪದವಿಯನ್ನು ಓದುತ್ತಿದ್ದಾಳೆ. ಸಾಕ್ಷಿಯು ಆಕೆ ದಯಾನಂದ ಸಾಗರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆ ಪದವಿಯನ್ನು ಮಾಡುತ್ತಿದ್ದಾಳೆಂದು ಹೇಳುತ್ತಾನೆ.

3. ಸಂತೋಷ ಪದ್ಮಣ್ಣವರ ನನ್ನ ತಂದೆ ಈಗ ಬದುಕಿಲ್ಲ. ದಿಃ 09.10.2024 ರಂದು ನನಗೆ ಹುಷಾರು ಇರಲಿಲ್ಲ ನನ್ನ ತಂದೆ ನನ್ನನ್ನು ನಾತು ಆಸ್ಪತ್ರೆಗೆ ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಚಿಕಿತ್ಸೆ ಕೊಡಿಸಿ ನನಗೆ ಹೊರಗೆ ಊಟ ಮಾಡಿಸಿಕೊಂಡು ಮನೆಗೆ ಕರೆದುಕೊಂಡು ಬಂದರು. ಆಗ ಸಮಯ ಸುಮಾರು 03.30 ಆಗಿತ್ತು. ಆಗ ನನ್ನ ತಂದೆ ಮನೆಯಲ್ಲಿ ಊಟ ಮಾಡಿದರು. ನಮ್ಮ ಮನೆಯ ಕೆಲಸದಾಳು ನಂದಾಳು ಬಟ್ಟೆಯನ್ನು ಒಗೆದು ಇಟ್ಟಿದ್ದಳು ಅವುಗಳನ್ನು ನನ್ನ ತಂದೆ ಗ್ಯಾಲರಿಯಲ್ಲಿ ಒಣಗಲು ಹಾಕಿದರು. ನಂತರ ನಾನು, ನನ್ನ ಅಪ್ಪ ಒಂದು ಕೋಣೆಯಲ್ಲಿ ಮಲಗಿಕೊಂಡೇವು. ನನ್ನ ಅಣ್ಣ ಸುಜಲ್ ಇನ್ನೊಂದು ಕೋಣೆಯಲ್ಲಿ ಮಲಗಿದ್ದ. ರಾತ್ರಿ ಸುಮಾರು 07.00 ಗಂಟೆಗೆ ನನ್ನನ್ನು ನನ್ನ ತಾಯಿ ಎತ್ತುಕೊಂಡು ಹೋಗಿ ನನ್ನ ಅಣ್ಣ ಮಲಗಿದ್ದ ಕೋಣೆಯಲ್ಲಿ ಮಲಗಿಸಿದಳು. ಸುಮಾರು 07.30 ರ ಸುಮಾರಿಗೆ ನಮ್ಮ ತಂದೆ ಅಯ್ಯೋ ಅಯ್ಯೋ ಎಂದು ಕೂಗಿಕೊಳ್ಳುವ ಅವಾಜ ಕೇಳಿಸಿತು. ಆ ಕಾಲಕ್ಕೆ ನಾನು ಮತ್ತು ನನ್ನ ಅಣ್ಣ ಇಬ್ಬರು ಎಚ್ಚರವಾದೇವು. ನಾನು, ನಮ್ಮ ಅಣ್ಣ ಕೋಣೆಯ ಬಾಗಿಲು ತೆರೆಯಲು ಪ್ರಯತ್ನಿಸಿದೇವು ಆದರೆ ಅದು ಹೊರಗಿನಿಂದ ಲಾಕ್ ಆಗಿತ್ತು ಆ ಕಾರಣಕ್ಕಾಗಿ ನಾವು ಬಾಗಿಲನ್ನು ಬಡಿದೇವು. ಸಾಕ್ಷಿ ಹೇಳುತ್ತಾರೆ ಕೋಣೆಯ ಬಾಗಿಲನ್ನು ನನ್ನ ತಾಯಿ ಹೊರಗಿನಿಂದ ಲಾಕ್ ಮಾಡಿದ್ದಳು.

4. ಸ್ವಲ್ಪ ಸಮಯದ ನಂತರ ನನ್ನ ತಾಯಿ ನಮ್ಮ ಕೋಣೆಯ ಬಾಗಿಲನ್ನು ತೆಗೆದು ಒಳಗೆ ಬಂದಿದ್ದರು. ಆ ಕಾಲಕ್ಕೆ ನನ್ನ ತಾಯಿ ಬೇವತಿದ್ದರು ಹಾಗೂ ನಗುತ್ತಿದ್ದರು. ಆಗ ನನ್ನ ತಾಯಿ ನಮ್ಮ ಕೋಣೆಯ ಬಾಗಿಲನ್ನು ಹಾಕಿದಳು ಅದು ಅಟೋಮೆಟಿಕ್ ಲಾಕ್ ಆಗಿದ್ದರಿಂದ ಲಾಕ್ ಆಗಿರುತ್ತದೆ. ಆದ್ದರಿಂದ ಕೋಣೆಯಲ್ಲಿ ನಾನು, ನನ್ನ ಅಣ್ಣ ಹಾಗೂ ನನ್ನ ತಾಯಿ ಇದ್ದೇವು. ಆ ಕಾಲಕ್ಕೆ ನನ್ನ ತಾಯಿಯು ಮಂಗಳೂರು ಭಾಷೆಯಲ್ಲಿ ಮಾತನಾಡಿ ಶೋಭಿತಗೌಡನನ್ನು ಹಿಂದಿನ ಬಾಗಿಲಿನಿಂದ ನಮ್ಮ ರೂಮಿನ್ ಕೋಣೆಯ ಕಿಟಕಿಯ ಬಳಿ ಬಾ ಕೀಯನ್ನು ಕೊಡುತ್ತೇನೆಂದು ಕರೆದಳು. ಆಗ ಆತನು ಕಿಟಕಿಯ ಬಳಿಯಿಂದ ಬಂದು ನಮ್ಮ

ತಾಯಿಯಿಂದ ನಮ್ಮ ಕೋಣೆಯ ಕೀಯನ್ನು ಪಡೆದುಕೊಂಡು ಬಂದು ನಮ್ಮ ಕೋಣೆಯ ಲಾಕ್ ನ್ನು ತೆಗೆದಿರುತ್ತಾನೆ. ಆ ಕಾಲಕ್ಕೆ ಶೋಭಿತಗೌಡನು ಹಳದಿ ಬಣ್ಣದ ಟಿ–ಶರ್ಟ ಹಾಗೂ ಕೈಗೆ ಗ್ಲೌಸ್ ಹಾಗೂ ಮುಖಕ್ಕೆ ಮಾಸ್ಕ್ ಹಾಕಿಕೊಂಡಿದ್ದ. ಆ ಕಾಲಕ್ಕೆ ಆತನು ಮಾಸ್ಕ್ ತೆಗೆದ ನಾನು ಆತನನ್ನು ನೀನು ಯಾರೆಂದು ಕೇಳಿದೆ. ಆತನು ತನ್ನ ಹೆಸರು ಮಹೇಶ ಎಂದು ಹೇಳಿದ. ಸಾಕ್ಷಿ ಹೇಳುತ್ತಾರೆ ಆ ಕಾಲಕ್ಕೆ ಆತನು ತನ್ನ ಹೆಸರು ಮಹೇಶ ಎಂದು ಸುಳ್ಳು ಹೇಳಿದ ಎಂದು ಹೇಳುತ್ತಾರೆ. ಆದರೆ ಆತನ ಹೆಸರು ಶೋಭಿತಗೌಡ ಎಂದು ಹೇಳುತ್ತಾರೆ. ಆತನ ಜೊತೆಯಲ್ಲಿ ಮತ್ತೊಬ್ಬ ವ್ಯಕ್ತಿ ಇದ್ದ ಆತನ ಹೆಸರು ಪವನ ಎಂದು. ಆ ಕಾಲಕ್ಕೆ ಹಾಲ್ ನಲ್ಲಿ ಸೋಪಾದ ಮೇಲೆ ಆತನು ಕುಳಿತಿದ್ದ. ಆ ಕಾಲಕ್ಕೆ ನಾನು ಸಹ ಆತನನ್ನು ನೋಡಿದೆ ಅವನು ಸಹ ನನ್ನನ್ನು ನೋಡಿದ. ಆ ಕಾಲಕ್ಕೆ ನನ್ನ ತಾಯಿಯು ಈ ಮೇಲೆ ಹೇಳಿದ ಇಬ್ಬರನ್ನು ಹೊರಗೆ ಕಳುಹಿಸಲು ಹೋದರು. ಆಗ ನಾನು ಮತ್ತು ನನ್ನ ಅಣ್ಣ ಹಾಲ್ ನಲ್ಲಿ ಬಂದೇವು. ಆ ಕಾಲಕ್ಕೆ ನಮ್ಮ ಮನೆಯ ಸಿಸಿಟಿವಿ ಆಫ್ ಆಗಿತ್ತು. ನಮ್ಮ ಮನೆಯಲ್ಲಿ ಸಿಸಿಟಿವಿಗಳಿಗೆ ಕನೆಕ್ಟ್ ಮಾಡಿದ ಟಿವಿ ಹಾಲ್ ನಲ್ಲಿದ್ದು ಅದು ಯಾವಾಗಲೂ ಆನ್ ಆಗಿ ಇರುತ್ತಿತ್ತು. ಆದರೆ ಆ ಸಮಯಕ್ಕೆ ಮಾತ್ರ ಅದು ಆಫ್ ಆಗಿತ್ತು. ಅದಲ್ಲದೇ ಹಾಲ್ ನಲ್ಲಿದ್ದ ಕಿಟಕಿಗಳಿಗೆ ಕರ್ಟನ್ಸ್ ಇರಲಿಲ್ಲ ಆದರೆ ಆ ಕಾಲಕ್ಕೆ ಕರ್ಟನ್ಸ್ ಹಾಕಿದ್ದರು. ಹಾಲ್ ನಲ್ಲಿ ಒಂದು ಗ್ರೇ ಕಲರ್ ತಲೆದಿಂಬು ಇದ್ದು ಸಾಮಾನ್ಯವಾಗಿ ಆ ದಿಂಬು ಅಲ್ಲಿ ಇರುತ್ತಿರಲಿಲ್ಲ. ನಮ್ಮ ಮನೆಯ Wifi ಆಫ್ ಆಗಿತ್ತು ಕಾರಣ ಅದು ಆನ್ ಆಗಿದ್ದರೆ ಹಸಿರು ಬಣ್ಣದ ಲೈಟ್ ಇರುತ್ತಿತು ಆದರೆ ಆ ಕಾಲಕ್ಕೆ ಅದು ಕೆಂಪು ಬಣ್ಣದ ಲೈಟ್ ಆನ್ ಆಗಿತ್ತು.

5. ಆ ನಂತರ ಆಗ ನಾನು ನನ್ನ ತಂದೆ ಮಲಗಿದ್ದ ಕೋಣೆಗೆ ಒಬ್ಬನೇ ಹೋದೇನು. ಆಗ ನಾನು ನನ್ನ ತಂದೆಯ ಬಲಗಾಲನ್ನು ಅಲುಗಾಡಿಸಿದೆ. ನನ್ನ ತಂದೆ ಅಂಗಾತ ಮಲಗಿದ್ದರು ನಾಲಿಗೆ ಹೊರ ಬಂದಿತ್ತು. ಕಣ್ಣುಗಳು ತೆರೆದ ಸ್ಥಿತಿಯಲ್ಲಿದ್ದು ಮೇಲೆ ಬಂದಿತ್ತು. ನನ್ನ ತಂದೆಯ ಕೋಣೆಯಲ್ಲಿ ಒಂದು ಸಿಂಕ್ ಇದ್ದು ಅಲ್ಲಿಂದ ನೀರು ತೆಗೆದುಕೊಂಡು ನನ್ನ ತಂದೆಯ ಮುಖದ ಮೇಲೆ ಹಾಕಲು ಪ್ರಯತ್ನಿಸುತ್ತಿದ್ದೆ ಆಗ ನನ್ನ ತಾಯಿ ಬಂದು ನನ್ನನ್ನು ಹಾಗೂ ನನ್ನ ಅಣ್ಣನನ್ನು ಕರೆದುಕೊಂಡು ಹೋಗಿ ಪಕ್ಕದ ಕೋಣೆಯಲ್ಲಿ ಬಿಟ್ಟು ಹೊರಗಿನಿಂದ ಲಾಕ್ ಹಾಕಿಕೊಂಡಳು. ಸಾಕ್ಷಿ ಮುಂದುವರೆದು ಹೇಳುತ್ತಾರೆ ನನ್ನ ತಂದೆ ನನ್ನ ಜೊತೆಯಲ್ಲಿ ಮಲಗಿದ್ದ ಕಾಲಕ್ಕೆ ಮಂಚದ ಒಂದು ಭಾಗದಲ್ಲಿ ಮಲಗಿದ್ದರು ಆದರೆ ನಾನು ನೋಡಿದ್ದಾಗ

ಅವರು ಮಂಚದ ಮಧ್ಯದಲ್ಲಿದ್ದರು. ನಾನು ನೀರು ಹಾಕಲು ಹೋದಾಗ ನನ್ನ ತಾಯಿಯು ನಿನ್ನ ತಂದೆ ಸಾರಾಯಿ ಕುಡಿದು ಮಲಗಿದ್ದಾರೆ, ಈಗ ಅವರ ಮುಖದ ಮೇಲೆ ನೀರು ಹಾಕಿದರೆ ಅವರ ಎದೆ ಉರಿಯುತ್ತದೆ ಎಂದು ಹೇಳಿದರು. ಒಂದು ಮೊಬೈಲ್ ಫೋನ್ ನ್ನು ನನ್ನ ತಾಯಿ ಹಾಗೂ ನನ್ನ ಅಣ್ಣ ಸುಜಲ್ ಬಳಸುತ್ತಿದ್ದರು ಅದನ್ನು ನನ್ನ ಅಣ್ಣ ಸುಜಲ್ ನಾವಿದ್ದ ರೂಮ್ ಗೆ ತೆಗೆದುಕೊಂಡು ಬಂದಿದ್ದ ಅದರಿಂದ ನಾನು ನನ್ನ ದೊಡ್ಡಪ್ಪನ ಮಗ ವಿಶಾಲ ಪದ್ಮನ್ನನವರಿಗೆ ಕರೆ ಮಾಡಿ ನನ್ನ ತಂದೆ ಏಕೋ ಮಾತನಾಡುತ್ತಿಲ್ಲ ತಕ್ಷಣ ಮನೆಗೆ ಬಾ ಎಂದು ತಿಳಿಸಿದೆ. ಅದರಂತೆ ನಾನು ಕರೆ ಮಾಡಿದ 2 ನಿಮಿಷದಲ್ಲೇ ಚಾಸಾಃ 26 ನಮ್ಮ ಮನೆಯ ಬಳಿ ಬಂದರು. ಆದರೆ ನನ್ನ ತಾಯಿ ಆತನನ್ನು ಒಳಗೆ ಬಿಡಲಿಲ್ಲ. ಆಗ ಚಾಸಾಃ 26 ರವರು ನನಗೆ ಕರೆ ನಿನ್ನ ತಾಯಿ ನನ್ನನ್ನು ಒಳಗೆ ಬಿಡುತ್ತಿಲ್ಲ ಈಗ ಏನು ಮಾಡಲಿ ಎಂದು ಹೇಳಿದ. ಆ ಕಾಲಕ್ಕೆ ನನ್ನ ತಾಯಿಯು ಚಾಸಾಃ 26 ರವರನ್ನು ಉದ್ದೇಶಿಸಿ ನಿನ್ನ ಚಿಕ್ಕಪ್ಪ ಸಾರಾಯಿ ಕುಡಿದು ಮಲಗಿದ್ದಾರೆ ಆಮೇಲೆ ಬಾ ಎಂದು ಹೇಳಿದರು. ಆತನು ಮತ್ತೇ ಕರೆ ಮಾಡಿ ನಿಮ್ಮ ಮಮ್ಮಿ ನನ್ನನ್ನು ಒಳಗಡೆ ಬಿಡುತ್ತಿಲ್ಲ ಏನು ಮಾಡಲಿ ಎಂದು ಕೇಳಿದ ಅದಕ್ಕೆ ನಾನು ಇನ್ನೊಮ್ಮೆ ಮನೆಯ ಬಳಿ ಬಾ ಎಂದು ಹೇಳಿದೆ. ಅದಕ್ಕೆ ಆತನು ಮತ್ತೇ ಬಂದ ಆದರೆ ಆ ಸಮಯದಲ್ಲೂ ಸಹ ನನ್ನ ತಾಯಿ ಬಾಗಿಲು ತೆಗೆಯದೇ ಆತನಿಗೆ ಈಗ ನಿನ್ನ ಚಿಕ್ಕಪ್ಪ ಕುಡಿದು ಮಲಗಿದ್ದಾರೆ ಆಮೇಲೆ ಬಾ ಎಂದು ಹೇಳಿದರು. ಆ ನಂತರ ಆತನು ತನ್ನ ಮನೆಗೆ ಹೋದ. ಆಗ ನನ್ನ ತಾಯಿಯು ನಮ್ಮ ಕೋಣೆಯ ಬಾಗಿಲು ತೆಗೆದು ನಮ್ಮ ಬಳಿಯಿದ್ದ ಮೊಬೈಲ್ ಫೋನ್ ತೆಗೆದುಕೊಂಡು ನಮ್ಮನ್ನು ಅದೇ ಕೋಣೆಯಲ್ಲಿ ಕೂಡಿ ಹಾಕಿ ಲಾಕ್ ಮಾಡಿದರು.

6. ಸ್ವಲ್ಪ ಸಮಯದ ನಂತರ ನನ್ನ ತಾಯಿಯು ಚಾಸಾಃ 26 ರವರಿಗೆ ಕರೆ ಮಾಡಿ ನಿನ್ನ ಚಿಕ್ಕಪ್ಪ ಯಾಕೋ ಏಳುತ್ತಿಲ್ಲ ಆದ್ದರಿಂದ ನೀನು ಕುಲಕರ್ಣಿ ಡಾಕ್ಟರನನ್ನು ಕರೆದುಕೊಂಡು ಬಾ ಎಂದು ಹೇಳಿದರು. ಡಾಕ್ಟರ್ ಮನೆಗೆ ಬರುವ 5 ನಿಮಿಷದ ಮುನ್ನ ನಮ್ಮ ತಾಯಿ ನಮ್ಮ ಕೋಣೆಯ ಲಾಕ್ ತೆಗೆದು ನನ್ನನ್ನು ಹಾಗೂ ನನ್ನ ಅಣ್ಣನನ್ನು ಹಾಲ್ ನಲ್ಲಿದ್ದ ಸೋಪಾದ ಮೇಲೆ ಕುಳಿತುಕೊಳ್ಳಲು ಹೇಳಿದರು. ಡಾಕ್ಟರ್ ಬಂದು ನನ್ನ ತಾಯಿ ಹಾಗೂ ಡಾಕ್ಟರ್ ನನ್ನ ತಂದೆ ಮಲಗಿದ್ದ ಕೋಣೆಗೆ ಹೋದರು. ನಾನು, ನನ್ನ ಅಣ್ಣ ಸುಜಲ್ ಹಾಗೂ ವಿಶಾಲ ಹಾಲ್ ನಲ್ಲೇ ಕುಳಿತುಕೊಂಡಿದ್ದೇವು. ಆಗ ವೈದ್ಯರು ನನ್ನ ತಂದೆಯನ್ನು ಪರಿಕ್ಷೀಸಿ ಅವರು ತೀರಿಕೊಂಡಿದ್ದಾರೆಂದು ನಮ್ಮ ಬಳಿ ಹೇಳಿದರು. ಆಗ ನಾನು ನನ್ನ ಅಕ್ಕ ಚಾಸಾಃ 1 ರವರಿಗೆ

ಕರೆ ಮಾಡಿ ಅಪ್ಪ ತೀರಿಕೊಂಡಿದ್ದಾರೆ ನೀನು ಈಗಲೇ ಬೆಂಗಳೂರಿನಿಂದ ತಿರುಗಿ ಬಾ ಎಂದು ಹೇಳಿರುತ್ತೇನೆ. ಆಗ ನನ್ನ ಅಕ್ಕಳು ನಾನು ಟಿಕೇಟ್ ಬುಕ್ ಮಾಡಿಕೊಂಡಿದ್ದೇನೆ ಬರುತ್ತೇನೆಂದು ಹೇಳಿದಳು. ನಾನು ನಂತರ ನಮ್ಮ ಕಸಿನ್ ಆದ ಪ್ರಜ್ವಲ್ ಮಹೇಶ ಪಲ್ಲೇದ ರವರಿಗೆ ಕರೆ ಮಾಡಿ ನನ್ನ ತಂದೆ ತೀರಿಕೊಂಡಿದ್ದಾರೆ ಎಂದು ಹೇಳಿದೆ ಆದರೆ ಆತ ಏ ನೀನು ಸುಳ್ಳು ಹೇಳುತ್ತಿದ್ದೀಯಾ ಎಂದು ಹೇಳಿದ ಆಗ ನಾನು ನನ್ನ ತಾಯಿಯ ಕೈಗೆ ಫೋನ್ ಕೊಟ್ಟೆ ಅವರು ಇಲ್ಲ ನನ್ನ ಗಂಡ ತೀರಿಕೊಂಡಿದ್ದಾರೆ ಎಂದು ಹೇಳಿರುತ್ತಾರೆ. ಆ ನಂತರ ನನ್ನ ದೊಡ್ಡಪ್ಪ ರಾಜು ದುಂಡಪ್ಪ ಪದ್ಮನ್ನನವರಿಗೆ ಕರೆ ಮಾಡಿ ನನ್ನ ತಂದೆ ತೀರಿಕೊಂಡಿದ್ದಾರೆ ಬನ್ನಿ ಎಂದು ಹೇಳಿದೆ. ಆ ನಂತರ ನನ್ನ ದೊಡ್ಡಪ್ಪ ಹಾಗೂ ನಮ್ಮ ಇತರೇ ಸಂಬಂಧಿಕರು ಮನೆಗೆ ಬಂದರು. ಅವರು ನಮ್ಮ ತಂದೆಯ ಶವವನ್ನು ಆಸ್ಪತ್ರೆಗೆ ಕಾರಿನಲ್ಲಿ ತೆಗೆದುಕೊಂಡು ಹೋಗಿರುತ್ತಾರೆ.

7. ನನ್ನ ಅಕ್ಕ ಚಾಸಾಃ 1 ರವರು ಮರುದಿನ ಮುಂಜಾನೆ ಬೆಳಗಾವಿಗೆ ಬಂದರು. ಆ ನಂತರ ನನ್ನ ತಂದೆಯ ಶವವನ್ನು ಮಣ್ಣು ಮಾಡಿದರು. ಆಗ ನನ್ನ ಅಕ್ಕಳು ಮನೆಯ ಸಿಸಿಟಿವಿಯನ್ನು ಪರೀಕ್ಷಿಸಬೇಕು ಎಂದು ಹೇಳಿದಳು ಆಗ ನಮ್ಮ ತಾಯಿಯು ಈಗ ತಾನೇ ನಿಮ್ಮ ತಂದೆಯ ಶವವನ್ನು ಮಣ್ಣು ಮಾಡಿ ಬಂದಿರುವೆ ಮೊದಲು ಜಳಕ ಮಾಡು ಎಂದು ಹೇಳಿದರು. ನನ್ನ ಅಕ್ಕ ಒಂದು ಬಾತ್ ರೂಮ್ ನಲ್ಲಿ ಜಳಕ ಮಾಡಲು ಹೋದಳು. ನಾನು ಹಾಗೂ ನನ್ನ ಅಣ್ಣ ಚಾಸಾಃ 25 ಮತ್ತೊಂದು ಬಾತ್‌ರೂಮ್ ನಲ್ಲಿ ಜಳಕ ಮಾಡಲು ಹೋದೇವು ಆಗ ನನ್ನ ಅಣ್ಣ ಚಾಸಾಃ 25 ಮೊದಲು ಜಳಕ ಮಾಡಿ ಹೊರ ಹೋದ. ಆತನಿಗೆ ನನ್ನ ತಾಯಿಯು ಮನೆಯ ಸಿಸಿಟಿವಿ ಪುಟೇಜ್ ಗಳನ್ನು ಅಳಿಸು ಹಾಕು ಎಂದು ಹೇಳಿರುತ್ತಾಳೆ. ಅದರಂತೆ ನನ್ನ ಅಣ್ಣ ಚಾಸಾಃ 25 ಮನೆಯ ಸಿಸಿಟಿವಿ ಪುಟೇಜ್ ಗಳನ್ನು ಅಳಿಸಿ ಹಾಕಿದನು. ನನ್ನ ಅಕ್ಕ ಜಳಕ ಮಾಡಿ ಬಂದು ಸಿಸಿಟಿವಿ ಪುಟೇಜ್ ಗಳನ್ನು ನೋಡಲು ಪ್ರಯತ್ನಿಸಿದಳು ಆದರೆ ಆ ಕಾಲಕ್ಕೆ ಅವುಗಳೆಲ್ಲಾ ಅಳಿಸಿ ಹೋಗಿದ್ದವು. ಆಗ ನನ್ನ ಅಕ್ಕಳು ನನ್ನ ತಾಯಿಯನ್ನು ಸಿಸಿಟಿವಿ ದೃಶ್ಯಾವಳಿಗಳು ಯಾಕೆ ಅಳಿಸಿ ಹೋಗಿವೆ ಎಂದು ಕೇಳಿದಳು ಅದಕ್ಕೆ ನನ್ನ ತಾಯಿಯು ಸುಜಲ್ ನು ಸಿಸಿಟಿವಿ ದೃಶ್ಯಾವಳಿಗಳನ್ನು ನೋಡಲು ಹೋಗಿ ಆಕಸ್ಮಿಕವಾಗಿ ಅಳಿಸಿ ಹಾಕಿದ್ದಾನೆಂದು ಹೇಳಿದಳು. ಆಗ ನನ್ನ ಅಕ್ಕಳು ನನ್ನ ಅಣ್ಣ ಚಾಸಾಃ 25 ರವರನ್ನು ಸಿಸಿಟಿವಿ ದೃಶ್ಯಾವಳಿಗಳನ್ನು ಅಳಿಸಿ ಹಾಕಲು ಕಾರಣ ಕೇಳಿದಳು ಅದಕ್ಕೆ ಆತನು ಇಲ್ಲ ಅಮ್ಮ ಅವುಗಳನ್ನು ಅಳಿಸು ಹಾಕು ಎಂದು ಹೇಳಿದ್ದರಿಂದ ನಾನೇ ಅಳಿಸಿ ಹಾಕಿದೆ ಎಂದು

ಹೇಳಿದನು. ಆಗ ನನ್ನ ಅಕ್ಕಳು ನನ್ನ ಅಮ್ಮನನ್ನು ನೀನು ಯಾಕೆ ಸಿಸಿಟಿವಿ ದೃಶ್ಯಾವಳಿಗಳನ್ನು ಅಳಿಸಿ ಹಾಕಲು ಹೇಳಿದೆ ಎಂದು ಕೇಳಿದಳು ಅದಕ್ಕೆ ನನ್ನ ತಾಯಿ ಸಂಬಂಧಿಕರು ಬಂದರೇ ಸಿಸಿಟಿವಿ ತೋರಿಸಿ ಎಂದು ತೊಂದರೆ ಕೊಡುತ್ತಾರೆ ಆ ಕಾರಣಕ್ಕಾಗಿ ನಾನೇ ಅಳಿಸಿ ಹಾಕಲು ಹೇಳಿರುತ್ತೇನೆಂದು ಹೇಳಿದರು.

8. ದಿಃ 17.10.2024 ರಂದು ನನ್ನನ್ನು ಮಾಳಮಾರುತಿ ಪೋಲೀಸ್ ಠಾಣೆಯವರು ಪೋಲೀಸ್ ಠಾಣೆಗೆ ಕರೆಯಿಸಿ ಆಗ ಠಾಣೆಯಲ್ಲಿದ್ದ ನನ್ನ ತಾಯಿ, ಶೋಭಿತಗೌಡ ಹಾಗೂ ಪವನ ಎಂಬಾತನನ್ನು ತೋರಿಸಿದರು. ಆ ಕಾಲಕ್ಕೆ ಪೋಲೀಸರು ನನ್ನ ತಾಯಿ, ಶೋಭಿತಗೌಡ, ಪವನ ಹಾಗೂ ಮತ್ತೊಬ್ಬ ಮಂಜುನಾಥ ಎಂಬಾತನು ಸೇರಿ ನನ್ನ ತಂದೆಯನ್ನು ಕೊಲೆ ಮಾಡಿದ್ದಾರೆ ಎಂದು ಹೇಳಿದರು. ಸಾಕ್ಷಿ ಮುಂದುವರೆದು ಹೇಳುತ್ತಾರೆ ಈ ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ನಾನು ಪೋಲೀಸರ ಮುಂದೆ ದಿಃ 16.10.2024 ರಂದು ಹೇಳಿದ್ದೆ. ಅದಕ್ಕೆ ಪೋಲೀಸರು ಘಟನೆಯ ದಿನ ನಿಮ್ಮ ಕೋಣೆಯ ಕೀಯನ್ನು ತೆಗೆದವನು ಇವನೇನಾ ಎಂದು ಪೋಲೀಸರು ಶೋಭಿತಗೌಡನನ್ನು ತೋರಿಸಿದರು ಅದಕ್ಕೆ ನಾನು ಹೌದು ಆ ದಿನ ಈತನೇ ನಮ್ಮ ಕೋಣೆಯ ಕೀಯನ್ನು ತೆಗೆದವನು ಇವನೇ ಎಂದು ಗುರುತಿಸಿ ಹೇಳಿದೆ.

9. ದಿಃ 19.10.2024 ರಂದು ಪೋಲೀಸರು ನನ್ನನ್ನು ಮತ್ತೇ ಪೋಲೀಸ್ ಠಾಣೆಗೆ ಕರೆಸಿದ್ದರು. ಆಗ ಮಂಜುನಾಥ ಎಂಬಾತನನ್ನು ನನಗೆ ತೋರಿಸಿ ಘಟನೆಯ ದಿನ ಈತನೇ ನಿಮ್ಮ ಮನೆಗೆ ಬಂದು ನಿಮ್ಮ ತಂದೆಗೆ ನಿದ್ರೆ ಮಾತ್ರೆ ನೀಡಿದ್ದವನು ಹಾಗೂ ಇಂಜೆಕ್ಷನ್ ಕೊಡಲು ಬಂದವನು ಎಂದು ಹೇಳಿದರು.

10. ದಿಃ 26.10.2024 ರಂದು ಬೆಳಗಾವಿಯ ನ್ಯಾಯಾಲಯಕ್ಕೆ ನನ್ನನ್ನು ಪೋಲೀಸರು ಹಾಗೂ ನನ್ನ ದೊಡ್ಡಪ್ಪ ಕರೆದುಕೊಂಡು ಹೋಗಿದ್ದರು ಅವರ ಮುಂದೆ ನಡೆದ ವಿಚಾರಗಳನ್ನು ನಾನು ಹೇಳಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದು ನಾನು ನ್ಯಾಯಾಧೀಶರ ಮುಂದೆ ಹೇಳಿದ ಹೇಳಿಕೆ ಎಂದು ಅದರಲ್ಲಿ ನನ್ನ ಸಹಿಗಳು ಇವೆ ಎಂದು ಗುರುತಿಸುತ್ತಾರೆ. ಇದು ಸಾಕ್ಷಿಯು BNSS ಕಲಂ 183 ರಡಿಯಲ್ಲಿ ಹೇಳಿರುವ ಹೇಳಿಕೆ

ಆಗಿರುತ್ತದೆ. ಸದರಿ ಹೇಳಿಕೆಯನ್ನು ಈಗ ನಿಪಿಃ 1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 1(ಎ), 1(ಬಿ), 1(ಸಿ) ಮತ್ತು 1(ಡಿ) ಎಂದು ಗುರುತಿಸಲಾಯಿತು.

11. ಸಾಕ್ಷಿಯು ವಿ.ಸಿ. ಮೂಲಕ ಹಾಜರಾಗಿರುವ ಒಬ್ಬ ಆರೋಪಿಯನ್ನು ನೋಡಿ ಈತನು ಮಂಜುನಾಥ ಎಂದು ಗುರುತಿಸುತ್ತಾನೆ. ಮತ್ತೊಬ್ಬ ಆರೋಪಿಯನ್ನು ನೋಡಿ ಈತನ ಹೆಸರು ಪವನ ಎಂದು ಹೇಳುತ್ತಾನೆ. ಮತ್ತೊಬ್ಬನನ್ನು ನೋಡಿ ಈತನ ಹೆಸರು ಶೋಭಿತಗೌಡ ಎಂದು ಹೇಳುತ್ತಾನೆ. ಮತ್ತೊಬ್ಬರನ್ನು ನೋಡಿ ಆಕೆ ನನ್ನ ತಾಯಿ ಉಮಾ ಪದ್ಮಣ್ಣನವರ ಎಂದು ಗುರುತಿಸುತ್ತಾರೆ. ಮತ್ತೊಬ್ಬ ಆರೋಪಿಯನ್ನು ನೋಡಿ ಈತ ನನ್ನ ಮಾಮ ಪ್ರಶಾಂತ ಎಂದು ಗುರುತಿಸುತ್ತಾರೆ.

12. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಎರಡು ಪ್ಯಾಕೇಟಗಳನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು ಅರದಲ್ಲಿ ಒಂದು ತಲೆದಿಂಬು ಹಾಗೂ ಒಂದು ಅದರ ಕವರ್ ಇದ್ದು ಸಾಕ್ಷಿಯು ನೋಡಿ ಗುರುತಿಸಿ ಇದೇ ತಲೆದಿಂಬು ಕವರ್ ನೊಂದಿಗೆ ನಮ್ಮ ಮನೆಯ ಹಾಲ್ ನಲ್ಲಿ ಇತ್ತು ಎಂದು ಗುರುತಿಸುತ್ತಾರೆ. ಆದ್ದರಿಂದ ಸದರಿ ತಲೆದಿಂಬು ಹಾಗೂ ಕವರ್ ನ್ನು ಪ್ರತ್ಯೇಕವಾಗಿ ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದ ಕಾರಣ ಪಾಟೀ ಸವಾಲನ್ನು ಮಧ್ಯಾಹ್ನದ ಕಲಾಪದ ಅವಧಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಆರ್.ಸಿ.ಪಿ. ವಕೀಲರಿಂದಃ**

ಆರೋಪಿ ಪರ ವಕೀಲರು ತಮ್ಮ ಹಿರಿಯ ವಕೀಲರಿಗೆ ಗಂಟಲು ಸಂಬಂಧಿತ ಸಮಸ್ಯೆ ಇರುವುದರಿಂದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಆರೋಪಿತರ ಪರ ವಕೀಲರಿಗೆ ಯಾವುದಾದರೂ ಆರೋಗ್ಯ ಸಮಸ್ಯೆ ಇರುವುದರ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದರೂ ಸಹಿತ ನೈಸರ್ಗಿಕ ನ್ಯಾಯದ ದೃಷ್ಟಿಯಿಂದ ಆರೋಪಿತರಿಗೆ ಅವಕಾಶ ಕೊಡುವ ಉದ್ದೇಶದಿಂದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.